ಬೆಳೆಯಬೇಕು. ಕಬ್ಬನ್ನೇ ಬೆಳೆಯಬೇಕೆಂಬ ಕನ್ಸೆಪ್ಟ್ ಈಗ ಬೇಡ. ಎರಡು-ಮೂರು ಸಲ ನೀರು ಬಿಟ್ಟು ಲೈಟ್ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡೋಣ. ಇದರ ಉಪಯೋಗ ಹೆಚ್ಚಿನ ಜನರಿಗೆ ಆಗುತ್ತದೆ. That is our idea. We will try our best.

MR. SPEAKER.— Question No 443 is held oevr Now I call the next Question.

1.30 P.M.

Loss of life and property following the agitation against the arrest of Smt. Indira Gandhi

508. SRI T. R. SHAMANNA (Basavanagudi).—Will the Chief Minister be pleased to state.—

(*a*) what has been the estimated loss of life and property on account of the recent agitation against the arrest of Smt. Indira Gandhi to the following.

(i) Corporation of the City of Bangalore.
(ii) Road Transport Corporation including B.T.S.
(iii) private property.
(iv) Government property.

SRI D. DEVARAJ URS (Chief Minister).—

(*a*) In the violent in cidents in Bangalore City, four persons died and thirty persons were injured, 160 Police personnel wore also injured

(i) it is now ascertained from the Corporation authorities that the approximate damage to the Corporation is about Rs. 1,10,000.
(ii) Rs. 2,62,520
(lii) About Rs. 61.00 Lakhs.
(vi) About Rs. 18.00 Lakhs (excluding the amount shown in Sl. No. (ii).

(The figure are as per the claims put forward).

ಶ್ರೀ ಟಿ. ಆರ್. ಶಾಮಣ್ಣ.—ದಿನಾಂಕ ೧೯ರ ಡಿಸೆಂಬರ್‌ನಲ್ಲಿ ನಡೆದಂತಹ ಆಕಸ್ಮಿಕ ಘಟನೆಗಳನ್ನು ತಪ್ಪಿಸುವ ವಿಚಾರದಲ್ಲಿ ಪೋಲೀಸಿನವರು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿದ್ದರೆ ಆಗತಕ್ಕ ಅನಾಹುತವನ್ನು ತಪ್ಪಿಸಬಹುದಾಗಿತ್ತು ಎನ್ನುವುದು ನನ್ನ ಖಚಿತ ಅಭಿಪ್ರಾಯ. ಈ ಬಗ್ಗೆ ಸರ್ಕಾರದ ಅಭಿಪ್ರಾಯ ಏನು ?

† SRI D. DEVARAJ URS.—I cannot give answer to this.

ಶ್ರೀ ಟಿ. ಆರ್. ಶಾಮಣ್ಣ.—ತಾವು ಕೊಟ್ಟಿರತಕ್ಕ ವರದಿ ಪ್ರಕಾರ ಸುಮಾರು ೮೩ ಲಕ್ಷ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿದೆಯೆಂದು ಕೊಟ್ಟಿದ್ದಾರೆ. ಈ ರೀತಿ ವಿಧ್ವಂಸಕ ಕೃತ್ಯಗಳನ್ನು ಯಾರೇ ಮಾಡಿರಲಿ: ಕಾಂಗ್ರೆಸ್‌ನವರಾಗಿರಲೀ, ಜನತಾದವರಾಗಿರಲೀ, ಕನ್ನಡ ಚಳುವಳಿಗಾರರಾಗಿರಲೀ ಹಾಗೂ ಕಮ್ಯುನಿಸ್ಟ್‌ಪಕ್ಷದವರಾಗಿರಲೀ ಅಂತಹವರಿಗೆ ಸಾರ್ವಜನಿಕ ಸ್ಥಳದಲ್ಲಿ ಶಿಕ್ಷೆ ಕೊಡತಕ್ಕ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸು.—ಸ್ವಾಮಿ, ಇಂಥ ವಿಚಾರದಲ್ಲಿ ನಿಮ್ಮ ಜೊತೆಗೆ ನಾನು ಇದ್ದೇನೆ. ಇದನ್ನು ಯಾರೇ ಮಾಡಲಿ ಅದು ನ್ಯಾಯವಲ್ಲ. ಸಾರ್ವಜನಿಕ ಸ್ಥಳದಲ್ಲಿ ಶಿಕ್ಷೆ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ವಿಶೇಷವಾಗಿ ಏನು ಕಾನೂನು ಮಾಡಬೇಕು ಅನ್ನುವುದರ ಬಗ್ಗೆ ಕೇಂದ್ರ ಸರ್ಕಾರವು ಕೂಡ ತೀವ್ರ ಪರಿಶೀಲನೆ ಮಾಡುತ್ತಿದೆ. It is under the serious consideration even at the Central level.

ಶ್ರೀ ಭೀಮಣ್ಣ ಖಂಡ್ರೆ.—ಇಲ್ಲಿ ಬೆಂಗಳೂರಿಗೆ ಸಂಬಂಧಪಟ್ಟ ಹಾಗೆ ವಿವರ ಕೊಟ್ಟಿದ್ದಾರೆ. ಇವೊತ್ತು ನಮಗೆ ಪತ್ರ ಬಂದಿದೆ; ಬಾಗಲಕೋಟೆಯಲ್ಲಿ ದಾವುದೆ ಷರೀಫ್ ಮತ್ತು ಮಹಮದ್ ಷರೀಫ್-ಪಠಣಾ ಎನ್ನುವ ೨೨ ವರ್ಷ ಮತ್ತು ೧೨ ವರ್ಷದ ಬಾಲಕರು ಸಬ್ ಇನ್ಸ್‌ಪೆಕ್ಟರ್ ಹಾರಿಸಿದಂತ ಒಂದೇ ಗುಂಡಿಗೆ ಬಲಿಯಾಗಿದ್ದಾರೆ. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇದರ ವರದಿ ತಮ್ಮಲ್ಲಿ ಇದೆಯೇ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಬೇರೆ ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಯಾವುದೇ ಒಂದು ವಿದ್ಯಾರ್ಥಿಗಳ ಚಳುವಳಿಯಾಗಲೀ, ಕಾರ್ಮಿಕರ ಚಳುವಳಿಯಾಗಲೀ ನಡೆದರೆ ಅದಕ್ಕೆ ಮೊದಲು ಆಪುತಿಯಾಗತಕ್ಕದ್ದು ಸಾರ್ವಜನಿಕರ ಆಸ್ತಿ. ಅದಶಲ್ಲಿಯೂ ಬಸ್ಸುಗಳು, ವಿದ್ಯುಚ್ಛಕ್ತಿ ಕಂಬಗಳು ತುತ್ತಾಗುತ್ತವೆ. ಇದನ್ನು ತಡೆಯುವುದಕ್ಕೆ ಆವಶ್ಯಕ ಕಾನೂನು ತರುವುದು ಮುಖ್ಯ ? ಆದಷ್ಟು ಬೇಗ ಈ ವಿಚಾರದಲ್ಲಿ ಕಾನೂನು ತರಂವುದಕ್ಕೆ ಇಚ್ಛೆ ಮಾಡುತ್ತೀರಾ ?

SRI D. DEVARAJ URS.—Sir, I think this question was discussed in the recent Governor's Conference and I am happy that the Leader of the Opposition is also anxious about it. I would rather say we are also equally anxious and we are seriously considering in what manner this can be done. We are considering whether there should be an amendment to the existing law or whether we should have a separate law. It is under consideration of the Government.

ಶ್ರೀ ಪಿ. ರಾಂದೇವ್.—ಈ ಘಟನೆಯಲ್ಲಿ ಎಷ್ಟು ಜನರನ್ನು ಬಂಧಿಸಿದ್ದೀರಿ ? ಎಷ್ಟು ಮೊಕದ್ದಮ್ಮೆಗಳನ್ನು ಹೂಡಿದ್ದೀರಿ ? ಈ ವಿವರ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇವರು ಕೇಳಿರುವುದಕ್ಕೆ ಉತ್ತರ ಕೊಟ್ಟಿದ್ದೇನೆ. ಅವರು ಬೇರೆ ನೋಟೀಸ್ ಕೊಟ್ಟರೆ ಉತ್ತರ ಒದಗಿಸುತ್ತೇನೆ,

ಶ್ರೀ ಮಳ್ಳೂರು ಆನಂದರಾವ್.—ಈ ಘಟನೆಗೆ ಸಂಬಂದಪಟ್ಟಂತೆ ಬಂಧನಕ್ಕೊಳಗಾದವರಲ್ಲಿ ಜನತಾ ಪಕ್ಷದವರು ಎಷ್ಟು ಮಂದಿ ಇದ್ದಾರೆ ? ಕಾಂಗ್ರೆಸ್‌ನವರು ಎಷ್ಟು ಮಂದಿ ಇದ್ದಾರೆ ? ಆರ್.ಎಸ್.ಎಸ್. ನವರು ಎಷ್ಟು ಮಂದಿ ಇದ್ದಾರೆ ? ದಯವಿಟ್ಟು ಹೇಳುತ್ತೀರಾ ?

SRI D. DEVARAJ URS.—Sir, I require a separate notice to answer that qestion. Any how with your permission I will give some of the details about it.

Cases Registered in Bangalore City — 197.

Number of persons arrested — 598.

I cannot say who are all the people. There may be persons who do not belong to and political party,

ಶ್ರೀ ಟಿ. ಆರ್. ಶಾಮಣ್ಣ.—ಈ ಘಟನೆಯಲ್ಲಿ ಸಂಕಷ್ಟಕ್ಕೆ ಗುರಿಯಾಗಿರುವವರಿಗೆ ಸಹಾನು ಭೂತಿಯಿಂದ ಪರಿಶೀಲನೆ ಮಾಡಿ ಪರಿಹಾರ ಕೊಡುತ್ತೇವೆಂದು ಹೇಳಿದ್ದೀರಿ. ಇಲ್ಲಿ ೮೩ ಲಕ್ಷ ರೂಪಾಯಿ ನಷ್ಟ ವಾಗಿದೆ ಎಂದು ಹೇಳಿದ್ದೀರಿ; ಇದರ ಬಗ್ಗೆ ಪಿಚಿತವಾದ ದಾಖಲೆ ತಯಾರು ಮಾಡಿದ್ದೀರಾ ?

ಶ್ರೀ ಡಿ ದೇವರಾಜ ಅರಸ್.—ಡಿಸರ್ವಿಂಗ್ ಕೇಸ್‌ನಲ್ಲಿ ಬರತಕ್ಕವರಿಗೆ ಪರಿಹಾರ ಕೊಡುತ್ತೇವೆಂದು ಹೇಳಿದ್ದೇವೆ: ಕೊಡುತ್ತೇವೆ, ಅನುಕೂಲಸ್ಥರಿಗೆ ಕೊಡಬೇಕೆಂದರೆ ಸಾಧ್ಯವಿಲ್ಲ. ಗಾಜಿನ ಕಿಟಕಿಗಳು; ಸಿನಿಮಾ ಥಿಯೇಟರುಗಳಂತವರು ಇನ್ಸೂರೆನ್ಸ್ ಮಾಡಿರುತ್ತಾರೆ; ಅವರಿಗೆ ದುಡ್ಡು ಬರುತ್ತೆ. ಕೆಲವರು ಸಣ್ಣ ಪುಟ್ಟ ಅಂಗಡಿ ಇಟ್ಟುಕೊಂಡಿದ್ದಂತ ಬಡವರಿಗೆ ನಷ್ಟವಾಗಿದ್ದರೆ ಅಂತಹವರಿಗೆ ಪರಿಹಾರ ಕೊಡ ಬೇಕಾಗುತ್ತದೆ. ಸಾಲದ ರೂಪದಲ್ಲಿ ಹಿಂದೆಯೂ ಸಹಾಯ ಮಾಡಿದ್ದೇವೆ ; ಇಂದೂ ಮಾಡ ಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರ ಮತ್ತು ನಮ್ಮ ನಡುವೆ ಒಪ್ಪಂದವಾಗಿದೆ; ನ್ಯಾಯಾಂಗ ತನಿಖೆ ಪ್ರಾರಂಭವಾದ ಮೇಲೆ ಡಿಸರ್ವಿಂಗ್ ಕೇಸಸ್‌ಗೆ ಸಂಬಂಧಪಟ್ಟವರು ವಿವರಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅಂತಹವರು ಕೊಟ್ಟೇ ಕೊಡುತ್ತಾರೆ; ಕೊಡದೇ ಇದ್ದರೆ ಹೇಗೆ.

Construction of Jokinahali (Gokanahalli) Tank in Hirekerur Sub-Division, Dharwar District.

565. SRI G. B. SHANKAR RAO (Hirekerur).—Will the Minister for Minor Irrigation be pleased to state.—

(*a*) whether the Government is aware that construction of Jokinahalli Tank in Hirekerur Sub-Division is unduly delayed ;

(*b*) if so, the reasons for this inordinate delay;

(*c*) whether the Government intends to complete the construction work soon;

(*d*) the time the work may take for completion ?

SRI D. B. CHANDRE GOWDA (Minister for Minor Irrigation)

(*a*) Yes.

(*b*) Due to contractual complications.

(*c*) Yes.

(*d*) about 1½ years.

SRI G. B. SHANKAR RAO.—The Hon. Minister has admitted that there has been inordinate delay, nearly 10 years' delay. May I know from the Government the increase in the cost of construction of this tank due to this inordinate delay ? May I also know who is the contractor and what is the penalty imposed on him for this delay ?

† SRI D. B. CHANDRE GOWDA.—The cost ingolved in the construction of this tank is about Rs. 4,19,000. I do agree that there has been delay of more than 10 years. It is not because of departmental difficulties but because the construction work was entrusted to one Sri Hiremath, an unemployed engineer graduate. He had done work to the extent of Rs. 10,000 and thereafter his whereabouts are not